# ನಿಮ್ಮೊಡನೆ

## ಪುರುಷ ಅಹಂಕಾರದಿಂದ ಕೊಳೆಯುತ್ತಿರುವ ಸಮಾಜ ವ್ಯವಸ್ಥೆಯನ್ನು ಮಾನವೀಯಗೊಳಿಸುವುದು ಎಲ್ಲರ ಹೊಣೆ

ಕಳೆದೊಂದು ತಿಂಗಳ ಅವಧಿಯಲ್ಲಿ ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ವರದಿಯಾಗಿರುವ ಲೈಂಗಿಕ ದೌರ್ಜನ್ಯದ ಪ್ರಕರಣಗಳು ಗಾಬರಿ ಹುಟ್ಟಿಸುವಂತಿವೆ. ಹೆಣ್ಣನ್ನು ಭೋಗದ ಆಟಿಕೆಯಾಗಿ ನೋಡುವ ಪುರುಷ ಅಹಂಕಾರದಿಂದ ಸಮಾಜದ ಎಲ್ಲ ವರ್ಗಗಳೂ ಕೊಳೆಯುತ್ತಿರುವುದಕ್ಕೆ ಉದಾಹರಣೆಯಂತೆ ಈ ಪ್ರಕರಣಗಳು ಕಾಣಿಸುತ್ತಿವೆ.

ಕೋಲ್ಕತ್ತದಲ್ಲಿ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಲಾಗಿದೆ. ನರ್ಸರಿಗೆ ಹೋಗುವ ಇಬ್ಬರು ಕಂದಮ್ಮಗಳು ಮಹಾರಾಷ್ಟ್ರದಲ್ಲಿ ಲೈಂಗಿಕ ಪೀಡನೆಗೊಳಗಾಗಿದ್ದಾರೆ. ಉತ್ತರ ಪ್ರದೇಶದಲ್ಲಿ ವೈದ್ಯನ ಕ್ರೌರ್ಯಕ್ಕೆ ದಾದಿ ತುತ್ತಾಗಿದ್ದಾಳೆ. ಖಾಸಗಿ ಶಾಲೆಯಲ್ಲಿ ನಕಲಿ ಎನ್‌ಸಿಸಿ ಶಿಬಿರ ನಡೆಸಿ, ವಿದ್ಯಾರ್ಥಿನಿಯ ಮೇಲೆ ಶಿಬಿರದ ಸಂಯೋಜಕ ಅತ್ಯಾಚಾರವೆಸಗಿದ ಘಟನೆ ತಮಿಳುನಾಡಿನಲ್ಲಿ ನಡೆದಿದೆ. ವಸತಿ ಶಾಲೆಯಲ್ಲಿ ಶಿಕ್ಷಕನೊಬ್ಬ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಘಟನೆ ಶಿವಮೊಗ್ಗ ಜಿಲ್ಲೆಯಿಂದ ವರದಿಯಾಗಿದೆ. ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಮಲಗಿದ್ದ ವೃದ್ಧೆಯೊಬ್ಬರ ಮೇಲೆ ಚಿಂತಾಮಣಿಯಲ್ಲಿ ಅತ್ಯಾಚಾರ ನಡೆದಿದೆ. ಈ ಅತ್ಯಾಚಾರ ಪ್ರಕರಣಗಳು, ಮನುಷ್ಯ ಮನುಷ್ಯನ ಬಗ್ಗೆ ನಂಬಿಕೆ ಕಳೆದುಕೊಳ್ಳುವಂಥ ಕ್ರೌರ್ಯ ಸಮಾಜದಲ್ಲಿ ಮಿತಿಮೀರಿ ರೂಪುಗೊಂಡಿರುವುದನ್ನು ಸೂಚಿಸುವಂತಿವೆ.

ಸಮಾಜಕ್ಕೆ ಮಾದರಿಯಾಗಬೇಕಾದ ಜನಪ್ರತಿನಿಧಿಗಳು ಕೂಡ ಲೈಂಗಿಕ ದೌರ್ಜನ್ಯದ ಆರೋಪಗಳನ್ನು ಎದುರಿಸುತ್ತಿರುವುದು ಬೇಲಿಯೇ ಹೊಲ ಮೇಯುವ ಮಾತನ್ನು ನೆನಪಿಸುವಂತಿದೆ. 135 ಶಾಸಕರು ಹಾಗೂ 16 ಸಂಸದರು ಸೇರಿದಂತೆ ಒಟ್ಟು 151 ಜನಪ್ರತಿನಿಧಿಗಳು ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಆ್ಯಸಿಡ್ ದಾಳಿ, ಅತ್ಯಾಚಾರ, ಮಹಿಳೆಯರ ಘನತೆಗೆ ಧಕ್ಕೆ ಉಂಟುಮಾಡುವುದು, ವೇಶ್ಯಾವಾಟಿಕೆಗೆ ಬಾಲಕಿಯರ ಮಾರಾಟ ಸೇರಿದಂತೆ 16 ಬಗೆಯ ಗಂಭೀರ ಆರೋಪಗಳು ಜನಪ್ರತಿನಿಧಿಗಳ ಮೇಲಿವೆ. ಸದ್ಯ ಜೈಲಿನಲ್ಲಿರುವ ಕರ್ನಾಟಕದ ನಿಕಟಪೂರ್ವ ಸಂಸದನೊಬ್ಬನ ಲೈಂಗಿಕ ಲೀಲಾವಳಿ ಜನಸಾಮಾನ್ಯರ ಕಲ್ಪನೆಗೂ ಮೀರಿದ್ದಾಗಿದೆ. ಅಧಿಕಾರ ಅನೈತಿಕತೆಗೆ ನೀಡುವ ಪರವಾನಗಿ ಎನ್ನುವಂತೆ ಅನೇಕ ಜನಪ್ರತಿನಿಧಿಗಳ ವರ್ತನೆಯಿದೆ. ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿಗಳಿಗೆ ಟಿಕೆಟ್ ನೀಡಿ ಗೆಲ್ಲಿಸಿಕೊಂಡು ಬರುವ ರಾಜಕೀಯ ಪಕ್ಷಗಳು ಮಹಿಳೆಯರ ಸುರಕ್ಷತೆಯ ಬಗ್ಗೆ ಕಾಳಜಿ ವ್ಯಕ್ತಪಡಿಸುವ ನಿರ್ಲಜ್ಜ ನಾಟಕದಲ್ಲಿ ತೊಡಗಿವೆ. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳಲ್ಲಿ ಎಲ್ಲ ರಾಜಕೀಯ ಪಕ್ಷಗಳದೂ ನೇರ ಅಥವಾ ಪರೋಕ್ಷ ಪಾತ್ರವಿದ್ದೇ ಇದೆ.

ಅತ್ಯಾಚಾರ ಪ್ರಕರಣಗಳನ್ನು ತಡೆಗಟ್ಟುವುದು ಸದ್ಯದ ಸಂದರ್ಭದಲ್ಲಿ ಸಾಧ್ಯವಿಲ್ಲದ ಸಂಗತಿ ಎನ್ನುವ ಕಹಿಸತ್ಯವನ್ನು ಒಪ್ಪಿಕೊಂಡೇ, ಅತ್ಯಾಚಾರ ಮನಸ್ಥಿತಿ ವಿರೋಧಿ ಆಂದೋಲನವನ್ನು ರೂಪಿಸಬೇಕಾಗಿದೆ. ಮಹಿಳೆಯರ ಬಗೆಗಿನ ಸಮಾಜದ ಭಾಷೆ ಮತ್ತು ನೋಟಕ್ಕೆ ಸಂವೇದನೆಯ ತುರ್ತು ಕಸಿಯಾಗಬೇಕಾಗಿದೆ. ಗಂಡಿನ ಚಾಪಲ್ಯ–ಕ್ರೌರ್ಯಕ್ಕೆ ಹೆಣ್ಣಿನ ವೇಷಭೂಷಣಗಳನ್ನು ಕಾರಣವನ್ನಾಗಿ ಗುರ್ತಿಸುವ ಅವಿವೇಕ ಕೊನೆಗೊಳ್ಳಬೇಕು. ಹೆಣ್ಣುಮಕ್ಕಳು ತಮ್ಮ ಲೈಂಗಿಕ ಬಯಕೆಗಳನ್ನು ಹತ್ತಿಕ್ಕಿಕೊಳ್ಳಬೇಕು ಎಂದು ಹೈಕೋರ್ಟೊಂದು ನಿರ್ದೇಶನ ನೀಡುವ ವ್ಯವಸ್ಥೆಯಲ್ಲಿ, ಜನಸಾಮಾನ್ಯರ ಭಾಷೆ ಮತ್ತು ಗ್ರಹಿಕೆ ಹೇಗಿರಬಹುದು?

ಕೇರಳದ ಚಿತ್ರೋದ್ಯಮದಲ್ಲಿನ ಕೀಚಕತನ ಕುರಿತ ವರದಿ ಈಗ ಸುದ್ದಿಯಲ್ಲಿದೆ. ಕರ್ನಾಟಕ ಸೇರಿದಂತೆ ಉಳಿದ ರಾಜ್ಯಗಳ ಚಿತ್ರೋದ್ಯಮಗಳಲ್ಲಿನ ಪರಿಸ್ಥಿತಿ ಭಿನ್ನವಾಗಿಯೇನೂ ಇಲ್ಲ. ‘ಕಾಸ್ಟಿಂಗ್ ಕೌಚ್’ ಬಗ್ಗೆ ಕನ್ನಡ ನಟಿಯೊಬ್ಬರು ದನಿಯೆತ್ತಿದಾಗ, ಚಿತ್ರೋದ್ಯಮ ಹಾಗೂ ನಾಯಕನಟರ ಅಭಿಮಾನಿಗಳ ಪ್ರತಿಕ್ರಿಯೆ ಮಾನವೀಯವಾಗಿಯೇನೂ ಇರಲಿಲ್ಲ. ಹೆಣ್ಣನ್ನು ಸರಕಿನ ರೂಪದಲ್ಲಿ ಭಾವಿಸುವ ಗಂಡಿನ ಧೋರಣೆಗೆ ದೇಶ–ಭಾಷೆಗಳ ಗಡಿಯಿಲ್ಲ.

ಅತ್ಯಾಚಾರ ಘಟನೆಯೊಂದು ಸಂಭವಿಸಿದಾಗ, ಆ ಕೃತ್ಯಕ್ಕೆ ರಾಜಕೀಯ ಆಯಾಮ ನೀಡುವ ಸಾರ್ವಜನಿಕ ಕಿಡಿಗೇಡಿತನದಿಂದ ಸಂತ್ರಸ್ತರ ನೋವು ಇನ್ನಷ್ಟು ಹೆಚ್ಚುತ್ತದಷ್ಟೇ. ಲೈಂಗಿಕ ದೌರ್ಜನ್ಯಗಳ ಪರವಾಗಿ ಯಾವುದೇ ರೀತಿಯಲ್ಲಿ ಸಹಾನುಭೂತಿ ವ್ಯಕ್ತಪಡಿಸುವುದು ಅಮಾನವೀಯ. ಅಂಥ ಅಮಾನವೀಯ ನಡವಳಿಕೆಯನ್ನು ಬಿಟ್ಟು, ಅಪರಾಧ ಎಸಗಿದ ವ್ಯಕ್ತಿಗೆ ಕಠಿಣ ಶಿಕ್ಷೆ ವಿಧಿಸುವ ನಿಟ್ಟಿನಲ್ಲಿ ವ್ಯವಸ್ಥೆಯನ್ನು ಕ್ರಿಯಾಶೀಲಗೊಳಿಸುವ ನಿಟ್ಟಿನಲ್ಲಿ ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವ ಪ್ರಯತ್ನಗಳು ಹೆಚ್ಚಾಗಬೇಕು. ಪಶು ಬಲ, ಹಣ ಬಲ, ಜಾತಿ ಬಲ ಹಾಗೂ ಅಧಿಕಾರ ಬಲವುಳ್ಳವರು ದೌರ್ಜನ್ಯವೆಸಗಿಯೂ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳುವ ಸ್ಥಿತಿ ಇನ್ನಾದರೂ ಕೊನೆಗೊಳ್ಳಬೇಕು. ಜನಸಾಮಾನ್ಯರಿಗೆ ನ್ಯಾಯ ಕೈಗೆಟಕುವುದಿಲ್ಲ ಎನ್ನುವ ಭಾವನೆಯಿಂದಲೇ ಕೆಲವು ಸಂತ್ರಸ್ತರು ದೌರ್ಜನ್ಯವನ್ನು ಮೌನವಾಗಿಯೇ ಸಹಿಸಿಕೊಳ್ಳುವುದಿದೆ. ಲೈಂಗಿಕ ದೌರ್ಜನ್ಯವೆಸಗಿದ ಯಾವ ವ್ಯಕ್ತಿಯೂ ಕಾನೂನಿನಿಂದ ತಪ್ಪಿಸಿಕೊಳ್ಳಲಾಗದು ಎನ್ನುವ ಸ್ಥಿತಿ ಸೃಷ್ಟಿಯಾದಾಗ, ಅಪರಾಧಗಳ ಸಂಖ್ಯೆ ಕಡಿಮೆಯಾಗಬಹುದು ಹಾಗೂ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತರು ಕಾನೂನು ಹೋರಾಟಕ್ಕೆ ಅಳುಕಿಲ್ಲದೆ ಮುಂದಾಗಬಹುದು.

**■ ರಘುನಾಥ ಚ.ಹ.**

ಲೈಂಗಿಕ ದೌರ್ಜನ್ಯವೆಸಗಿದ ಯಾವ ವ್ಯಕ್ತಿಯೂ ಕಾನೂನಿನಿಂದ ತಪ್ಪಿಸಿಕೊಳ್ಳಲಾಗದು ಎನ್ನುವ ಸ್ಥಿತಿ ಸೃಷ್ಟಿಯಾದಾಗ, ಅಪರಾಧಗಳ ಸಂಖ್ಯೆ ಕಡಿಮೆಯಾಗಬಹುದು ಹಾಗೂ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತರು ಕಾನೂನು ಹೋರಾಟಕ್ಕೆ ಅಳುಕಿಲ್ಲದೆ ಮುಂದಾಗಬಹುದು.



ಈಶ್ವರ್